## ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನವಲಗುಂದ

| | |
|---|---|
| ಸಿ.ಸಿ. ನಂಬರ್ | - 596/2024 |
| ಸಿ.ಡಬ್ಲೂ | - 08 |
| ಪಿ.ಡಬ್ಲೂ | - 03 |
| ಸಾಕ್ಷಿಯ ಹೆಸರು | - ಲಕ್ಕಪ್ಪ ಶಂಕ್ರಪ್ಪ ಬಡಿಗೇರ |
| ವಯಸ್ಸು | - 29 ವರ್ಷ |
| ಉದ್ಯೋಗ | - ಶಿಕ್ಷಕ |
| ವಾಸ ಸ್ಥಳ | - ಬೆಂಗಳೂರು |

ದಿನಾಂಕಃ 18/07/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿಯ ಪರಿಚಯ ಇದೆ. ಚಾಸಾ-1 ರವರ ಪರಿಚಯವಿಲ್ಲ. ಚಾಸಾ-9 ನನ್ನ ಸಹೋದರಿ. ಚಾಸಾ-10 ರಿಂದ 13 ರವರ ಪರಿಚಯವಿಲ್ಲ. ಮೃತ ಶಿವಪ್ಪಾ ಮೇಟಿ ರವರ ಪರಿಚಯ ಇಲ್ಲ.

ದಿನಾಂಕಃ 23-06-2021 ರಂದು ನಾನು ಹಾಗೂ ಚಾಸಾ-9 ರವರು ಕಾರ್ ನಲ್ಲಿ ಹುಬ್ಬಳ್ಳಿಯಿಂದ ಗದಗಕ್ಕೆ ಹೋಗುತ್ತೀರುವಾಗ ಸದರಿ ಕಾರನ್ನು ಆರೋಪಿ ಚಲಾಯಿಸುತ್ತಿದ್ದು, ಅಂದಾಜು ಬೆ.09.30 ಗಂಟೆಗೆ ಮುಖ್ಯ ರಸ್ತೆಯಲ್ಲಿ ಭದ್ರಾಪೂರ ಗ್ರಾಮದ ಹತ್ತಿರ ಟ್ಯಾಕ್ಟರ್ ಚಾಲಕ ಟ್ಯಾಕ್ಟರ ನ್ನು ಒಮ್ಮಲೇ ಮುಖ್ಯ ರಸ್ತೆಗೆ ಅತೀ ವೇಗದಿಂದ ಚಲಾಯಿಸಿದ್ದು, ಆರೋಪಿ ಕಾರನ್ನು ಒಮ್ಮಲೇ ನಿಲ್ಲಿಸಲು ಪ್ರಯತ್ನಿಸಿದ್ದು ಆಗ ಅಪಘಾತವಾಗಿರುತ್ತದೆ. ಸದರಿ ಅಪಘಾತದಿಂದ ನನಗೆ ಮತ್ತು ಚಾಸಾ-9 ರವರಿಗೆ ಗಾಯಗಳಾಗಿರುತ್ತವೆ. ಪ್ರಕರಣಕ್ಕೆ ಸಂಬಂಧಿಸಿ ನಾನು ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಸದರಿ ಅಪಘಾತ ಟ್ಯಾಕ್ಟರ್ ಚಾಲಕನ ತಪ್ಪಿನಿಂದ ಆಗಿರುತ್ತದೆ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ದಿಃ 23-06-2021 ರಂದು ಬೆ.09.15 ಗಂಟೆಗೆ ಆರೋಪಿ ಕಾರ್ ಚಾಲಕನ ಕಾರ್ ಸಂಃ KA-26/B-2162 ನೇದ್ದನ್ನು ಗದಗ ಕಡೆಯಿಂದ ಹುಬ್ಬಳ್ಳಿಯ ಕಡೆಗೆ ಅತೀ ವೇಗ ಮತ್ತು ಅಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು ರಸ್ತೆಯ ಪಕ್ಕದಲ್ಲಿ ಪಂಚರ ಆಗಿದ್ದ ಟೈಯರ್ ನ್ನು ತಿದ್ದಿಸಲು ನಿಂತುಕೊಂಡಿದ್ದ ಶೇಖಪ್ಪ ತಂದೆ ಈಶ್ವರಪ್ಪ ಜಾವೂರ ರವರಿಗೆ ಅಪಘಾತ ಪಡಿಸಿ ಸ್ವಲ್ಪ ಮುಂದೆ ಹೋಗಿ ರಸ್ತೆಯ ಬದಿಗೆ ನಿಂತಿದ್ದ ಟ್ಯಾಕ್ಟರ್ ಸಂಃ KA-25/T-9030 ನೇದ್ದಕ್ಕೆ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಭಾಗವನ್ನು **ನಿಪಿ-5** ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಂ ಎಸ್ ಎಚ್ ವಕೀಲರಿಂದ**

ಏನು ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**